ಮಾಡುವುದಿರಲಿ, ಬರೆಯುವುದನ್ನೇ ನಿಲ್ಲಿಸುವಂಥ ಶಪಥ ಮಾಡುವ ಸಂದರ್ಭ ಬಂತಲ್ಲ ಎಂದು ಪರಿತಪಿಸುತ್ತ, ಅವು ಮತ್ತೆ ಬರದಂತೆ ಹೆದರಿಸಲು ತೋಟದ ನಾಲ್ಕೂ ಮೂಲೆಗೆ ನಾಲ್ಕು ಹುಲಿಗಳ ಗೊಂಬೆಯನ್ನು ತಂದು ಇಡುವಂತೆ ಹೇಳಿದರು. ಹುಲಿಗಳನ್ನ ಕಂಡರೆ ಅವಕ್ಕೆ ತುಂಬಾ ಭಯ ಎಂದು ಯಾರೋ ಐಡಿಯಾ ಕೊಟ್ಟಿದ್ದರು. 'ಅದಕ್ಕೆಲ್ಲ ಬಗ್ಗೋ ಜಾತಿವಲ್ಲ ಅವು. ಒಂದು ಏರ್‌ರೈಫಲ್ ತಂದುಕೊಡ್ರೀ. ಅದರ ಗುಂಡು ತಗುಲಿದ್ರೂ ಬರೀ ಗಾಯ ಆಗುತ್ತಷ್ಟೇ ಹೊರತು ಸಾಯಲ್ಲ. ಅದರಿಂದ ಅವುನ್ನ ಓಡುಸ್ದಂಗೂ ಆಗುತ್ತೆ, ಕೊಂದ ಪಾಪನೂ ಬರಲ್ಲ...' ಎಂದು ಮಲ್ಲೇಶಿ ತನ್ನ ಐಡಿಯಾ ಕೊಟ್ಟ. 'ಕೋತಿ ಹಿಡಿಯೋರಿಗೆ ಒಂದಕ್ಕಿಷ್ಟು ಅಂತ ಕೊಟ್ಟರೆ, ಹಿಡ್ಕಂಡೋಗಿ ಕಾಡಿಗೆ ಬಿಡ್ತಾರಂತೆ...' ಎಂದು ಪಾವಂದಯ್ಯನವರ ಪತ್ನಿಯೂ ಸಲಹೆ ಕೊಟ್ಟಳು.

ಕೋತಿಯ ಹಿಂಡು ತೋಟಕ್ಕೆ ಬರದೇ ಇದ್ದರೂ, ಉಳಿದಿದ್ದ ಒಂದು ಕೋತಿ ತನ್ನ ಮಡಿಲಲ್ಲಿ ಮರಿಯೊಂದನ್ನ ಹಿಡಿದುಕೊಂಡು ಓಡಾಡುತ್ತಿದ್ದುದನ್ನು ಪಾವಂದಯ್ಯ ಕಂಡರು. ಸಾಮಾನ್ಯವಾಗಿ ಕೋತಿ ಮರಿಗಳು ತಾವೇ ತಾಯಿಯ ಹೊಟ್ಟೆಯನ್ನು ತಬ್ಬಿಹಿಡಿದಿರುತ್ತವೆ. ಆದರೆ, ಇಲ್ಲಿ ತಾಯಿಯೇ ಮುಂದಿನ ಒಂದು ಕಾಲಲ್ಲಿ ಮರಿಯನ್ನು ತಬ್ಬಿಹಿಡಿದು ಮೂರುಕಾಲಲ್ಲೇ ಕುಂಟುವಂತೆ ನಡೆಯುತ್ತಿದೆ! ಯಾಕೋ ಅದನ್ನು ಬೆನ್ನತ್ತಿ ಓಡಿಸಬೇಕು ಎಂದು ಅನಿಸಲಿಲ್ಲ. ಹಾಗೇ ಅದರ ಚಲನವಲನ ಗಮನಿಸಿದರು. ಪಾಪ, ಮರಿ ಸತ್ತುಹೋಗಿದೆ! ಮೂಗು ಸಂಕುಲಿಸಿ ನೋಡಿದರು. ವಾಸನೆಯೂ ಬರುತ್ತಿದೆ... ಅವತ್ತು ದೊಡ್ಡಕೋತಿಗಳು ಸುಟ್ಟು ಕರಕಲಾಗಿ ಬಿದ್ದಾಗಲೂ ಕಲಕದ ಅವರ ಹೃದಯಕ್ಕೆ ಅಯ್ಯೋ ಪಾಪ ಅನಿಸಿತು. ಮಲ್ಲೇಶಿಯನ್ನು ಕರೆದು ಅದಕ್ಕೆ ಅನ್ನಾಹಾರ ಇಡಿಸಿದರು. ಹ್ಞೂಃ... ಅದು ಮುಟ್ಟಲಿಲ್ಲ. ನೋಡಿದರೆ ಮರಿ ಸತ್ತು ಎರಡು ಮೂರು ದಿನವೇ ಆದಂತಿದೆ. ಜನರನ್ನು ಕಂಡರೂ ಅದು ಯಾವುದೇ ಭಯದ ಪ್ರತಿಕ್ರಿಯೆ ತೋರದೇ ಪಿಳಪಿಳನೆ ಕಣ್ಣು ಬಿಡುತ್ತಿದೆ ಅಷ್ಟೇ... ಬಹುಶಃ, ಶಿಶುಶೋಕದಲ್ಲಿ ಅನ್ನಾಹಾರ ತೊರೆದುಬಿಟ್ಟಿದೆ ಎನಿಸಿತು. ಮೆಲ್ಲಮೆಲ್ಲಗೆ ಹತ್ತಿರ ಹೋದರು. ಸುಮ್ಮನೇ ಇತ್ತು. ಅದರ ಕೈಯ್ಯಿಂದ ಮರಿಯನ್ನು ಕಿತ್ತುಕೊಂಡು ತಾಯಿಯನ್ನಾದರೂ ಉಳಿಸುವ ಮನಸ್ಸು ಮಾಡಿದರು. ಅದು ಪ್ರತಿರೋಧ ತೋರಿ ಮರದ ಮೇಲೆ

